ಚಿಂತಾಮಣಿಯ ಜಿಲ್ಲಾ ಗ್ರಂಥಾಲಯ

೧೨೩೩. ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಗ್ರಂಥಾಲಯ, ಚಿಂತಾಮಣಿಯಲ್ಲಿ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ನೌಕರರ ಒಟ್ಟು ಸಂಖ್ಯೆ ಎಷ್ಟು ?

ಆ) ದಿನಗೂಲಿ ನೌಕರರಲ್ಲಿ ಎಷ್ಟು ನೌಕರರು ೫ ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿದ್ದಾರೆ ಹಾಗೂ ತಿವರಿಗೆ ಕೊಡುತ್ತಿರುವ ಸಂಭಾವನೆ ಎಷ್ಟು ?

ಇ) ಇವರನ್ನು ಖಾಯಂ ಮಾಡಲು ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಹನ್ನೊಂದು

ಆ) ಏಳು. ಒಂದು ದಿನಕ್ಕೆ ರೂ. ೬-೦೦

ಇ) ಈ ೧೧ ಜನ ಕಸಗುಡಿಸುವವರು ಮಂಜೂರಾದ ಹುದ್ದೆಗಳಲ್ಲಿ ಮತ್ತು ಕ್ರಮಬದ್ಧ ವೇತನ ಶ್ರೇಣಿಗಳಲ್ಲಿ ಹಾಗೂ ನೇಮಕಾತಿ ನಿಯಮಗಳ ಪ್ರಕಾರ ನೇಮಕಗೊಳ್ಳದೆ ಇರುವುದರಿಂದ ಇವರನ್ನು ಖಾಯಂ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀರೂರು ಮತ್ತು ಕಡೂರಿನಲ್ಲಿರುವ ಶಾಲಾ ಕಟ್ಟಡಗಳು

೧೨೪೨. ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀರೂರು ಮತ್ತು ಕಡೂರು ಪಟ್ಟಣಗಳಲ್ಲಿರುವ ಪ್ರಾಥಮಿಕ ಮತ್ತು ಪೌಢ ಶಾಲಾ ಕಟ್ಟಡಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮೇಲ್ಕಂಡ ಶಾಲಾ ಕಟ್ಟಡಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಮುಖ್ಯ ಅಭಿಯಂತರು (ಕಟ್ಟಡ ಮತ್ತು ಸಂಪರ್ಕ) ಬೆಂಗಳೂರು ಇವರಿಗೆ ಈ ಸಾಲಿನ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಬಿಡುಗಡೆ ಮಾಡಿರುವ ಹಣದಲ್ಲಿ ಕೂಡಲೆ ದುರಸ್ತಿ ಕ್ರಮ ತೆಗೆದುಕೊಳ್ಳುವಂತೆ ಕೋರಲಾಗಿದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಎಲ್ಲಿ ಮುನಿಸಿಪಾಲಿಟಿಗಳು ಇವೆ ಅಂಥ ಕಡೆ ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಆದರೆ ಆ ಶಾಲೆಗಳ ದುರಸ್ತಿ ಬಗ್ಗೆ ಮುನಿಸಿಪಾಲಿಟಿಗಳು ಆರ್ಥಿಕ ಸಂಕಷ್ಟದಿಂದ ಗಮನ ಹರಿಸುತ್ತಿಲ್ಲ. ಗ್ರಾಮಾಂತರ ಪ್ರದೇಶಗಳವರು ಫಂಡ್ ಕೊಟ್ಟರೆ ಅಥವಾ ಸರ್ಕಾರದವರು ಹಣ ಒದಗಿಸಿದರೆ ಆಗುತ್ತದೆ. ಕಡೂರಿನಲ್ಲಿರತಕ್ಕ ಹೈಸ್ಕೂಲಿನೊಳಗಡೆ ಮಕ್ಕಳು ಕೂರುವಂತಿಲ್ಲ. ಕಟ್ಟಡ ಹಾಳಾಗಿ ೪ ವರ್ಷವಾದರೂ ರಿಪೇರಿ ಆಗಿಲ್ಲ. ಮುನಿಸಿಪಾಲಿಟಿಯವರು ಮಾಡುತ್ತಿಲ್ಲ. ಊರಿನವರು ಗಮನ ಕೊಡುತ್ತಿಲ್ಲ. ಆದನ್ನು ಕೂಡಲೇ ರಿಪೇರಿ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಪುರಸಭೆ ಶಾಲಾ ಕಟ್ಟಡ ರಿಪೇರಿ ಆಗಬೇಕಾದುದು ನಿಜ. ಅದನ್ನು ಆದಷ್ಟು ಜಾಗ್ರತೆ ರಿಪೇರಿ ಮಾಡಿಸತಕ್ಕ ವ್ಯವಸ್ಥೆ ಮಾಡುತ್ತೇನೆ.